ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, 19th February, 1973/ Magha 30, 1894 S.E.

The House met in the Assembly Chamber, Vidhana Soudha, at one of the Clock.

MADAM SPEKER [SMT. K. S. NAGARATHNAMMA] in the Chair.

STARRED QUESTIONS

(t0 which oral answers were given)

Promotions to Veterinary and Livestock Inspectors

9. Sri S. M. SHEERANALY CHANDRASEKHAR (Hosanagar).—

Will the Minister of State for Animal Husbandry be pleased to state :—

(*a*) whether it has come to the notice of Government that the Veterinary and Livestock Inspectors of Animal Husbandry and Veterinary Services Department are not given promotions to selection grade till to-day ;

(*b*) if so, the reasons for not giving promotions to these officials on selection grade ?

Sri N. CHIKKE GOWDA (Minister of State for Animal Husbandry)–

(*a*) Yes.

(*b*) No. finalisation of the gradation list of the Veterinary and Livestock Inspectors appointed after 1st November 1956.

(ಬ) ಪ್ರಶ್ನೆಗೆ ಉತ್ತರವಾಗಿ 'ನೋ' ಎಂದಿರುವುದನ್ನು 'ನನ್' ಎಂದು ತಿದ್ದಿಕೊಳ್ಳಬೇಕು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್. - ಎರಡನೇ ಪ್ರಶ್ನೆಗೆ ಉತ್ತರವಾಗಿ ಇನ್ನೂ ಅಂತಿಮಗೊಳಿಸಲಾಗಿಲ್ಲ ಎಂದು ಹೇಳಿದ್ದೀರಿ. ಅಂದರೆ ಇನ್ನು ಎಷ್ಟು ಕಾಲ ಬೇಕಾಗುತ್ತದೆಂದು ಹೇಳುತ್ತೀರಾ ?

†ಶ್ರೀ ಎನ್. ಚಿಕ್ಕೇಗೌಡ.—1956ರಿಂದ ಆಗಿಲ್ಲ ಎಂದು ಉತ್ತರದಲ್ಲಿ ಹೇಳಲಾಗಿದೆ. ಆದರೂ ಅಲ್ಲಿಂದ ಇಲ್ಲಿಯವರೆಗೆ 287 ಪೊಸ್ಟ್‌ಗಳನ್ನು ಅಪ್-ಗ್ರೇಡ್ ಮಾಡಿದ್ದೇವೆ. 65 ಫೋಸ್ಟ್‌ಗಳನ್ನು ಎರಡನೇ ಗ್ರೇಡಿನಿಂದ ಒಂದನೇ ಗ್ರೇಡಿಗೆ ರೂ. 160 350ರ ಸ್ಕೇಲ್‌ನಲ್ಲಿ ಮಾಡಿದ್ದೇವೆ. ಇನ್ನೂ ಕೆಲವು ಕೇಸುಗಳನ್ನು ಸರ್ಕಾರದವರು ಕನ್ಸಿಡರ್ ಮಾಡುತ್ತಿದ್ದಾರೆ. ಸೀನಿಯಾರಿಟಿಯಲ್ಲಿ ಕೆಲವು ಡಿಸ್ಪ್ಯೂಟೆಡ್ ಇರುವುದರಿಂದ ತೀರ್ಮಾನ ತೆಗೆದುಕೊಳ್ಳಲು ತಡವಾಗಿದೆ.

ಶ್ರೀ ಎಸ್. ಎಂ. ಶಿರನಾಳ ಚಂದ್ರಶೇಖರ್.—ಲಿಸ್ಟನ್ನು ಅಂತಿಮಗೊಳಿಸಲು ಏನೇನು ತೊಂದರೆಗಳು ಬಂದಿವೆ ?

ಶ್ರೀ ಎನ್. ಚಿಕ್ಕೇಗೌಡ.—ಸೀನಿಯಾರಿಟಿ ವಿಚಾರದಲ್ಲಿ ಕೆಲವು ತೊಂದರೆಗಳಿರುವುದು ಏನಿದೆ ಅದನ್ನು ವಿಚಾರ ಮಾಡಬೇಕಾಗಿದೆ.

ಶ್ರೀ ಸಿ. ಬೈರೇಗೌಡ.—ಸೀನಿಯಾರಿಟಿಯನ್ನು ಅಂತಿಮಗೊಳಿಸಲು ಪ್ರತಿಯೊಂದು ಇಲಾಖೆಯಲ್ಲಿಯೂ ಒಬ್ಬರನ್ನು ಐ. ಎ. ಎಸ್. ಆಫೀಸರನ್ನು ನೇಮಕ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಸೀನಿಯಾರಿಟಿಯನ್ನು ಪರಿಶೀಲಿಸಲು ಆಯಾ ಇಲಾಖೆಯಲ್ಲಿಯೇ ಐ. ಎ ಎಸ್. ದರ್ಜೆಯ ಅಧಿಕಾರಿಗಳು ಇದ್ದಾರೆ. ಸೆಕ್ರೆಟೇರಿಯಟ್ ಮಟ್ಟದಲ್ಲಿಯೂ ಸಹ ಸೆಕ್ರೆಟರಿ ಪೋಸ್ಟನ್ನು ಕಮೀಷನರ್ ಗ್ರೇಡ್‌ಗೆ ಹೆಚ್ಚು ಮಾಡಲಾಗಿದೆ. ಇವರು ಪರಿಶೀಲಿಸಿದ ನಂತರ ಸರ್ಕಾರದವರು ಅಂತಿಮ ತೀರ್ಮಾನ ಕೈಕೊಳ್ಳುವರು.

ಶ್ರೀ ಎಂ. ಮಲ್ಲಪ್ಪ.—ಯಾರಿಗಾದರೂ ಸೀನಿಯಾರಿಟಿಯಲ್ಲಿ ಅನ್ಯಾಯವಾದರೆ ಅಂತಹವರು ಕೋರ್ಟಿಗೆ ಹೋಗುವ ಬದಲು ಟ್ರಿಬ್ಯುನಲ್ ನೇಮಕ ಮಾಡಿ ಅದರ ಮೂಲಕ ತೀರ್ಮಾನ ಮಾಡುವುದಕ್ಕೆ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಕೆಲವು ದರ್ಜೆಗಳನ್ನು ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಪರಿಶೀಲಿಸಿದ ನಂತರ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಮತ್ತೆ ಕೆಲವು ದರ್ಜೆಗಳನ್ನು ರಾಜ್ಯ ಸರ್ಕಾರದವರೇ ತೀರ್ಮಾನ ಮಾಡುತ್ತಾರೆ. ಈ ರೀತಿ ತೀರ್ಮಾನವಾದ ಮೇಲೆ ಕೂಡ ಏನಾದರು ಅನ್ಯಾಯವಾಗಿದ್ದರೆ ರಾಜ್ಯಾಂಗದಲ್ಲಿರುವ ಹಕ್ಕಿನ ಪ್ರಕಾರ ಅನ್ಯಾಯವಾದವರು ಕೋರ್ಟಿಗೆ ಹೋಗುತ್ತಾರೆ. ಅದು ಕೋರ್ಟಿನಲ್ಲಿ ಸಾಬೀತಾದರೆ ಕೋರ್ಟ್ ಏನು ತೀರ್ಮಾನ ಕೊಡುತ್ತದೋ ಅದಕ್ಕೆ ನಾವು ಬದ್ಧರಾಗುತ್ತೇವೆ.

Sri S. M. YAHYA.—How many writ petitions pertaining to this seniority are pending in the High Court ?

Sri N. CHIKKE GOWDA. If the hon. Member puts a separate question I will furnish the information

ಶ್ರೀ ಎಸ್. ಎಂ. ಶಿರನಾಳ ಚಂದ್ರಶೇಖರ್.—ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡುವಾಗ ಕೇವಲ ಸರ್ವಿಸನ್ನು ಗಮನಕ್ಕೆ ತೆಗೆದುಕೊಳ್ಳುತ್ತೀರೋ ಅಥವಾ ಮೆರಿಟ್ಸ್ ಮೇಲೆ ಮಾಡುತ್ತೀರೋ ?

ಶ್ರೀ ಎನ್. ಚಿಕ್ಕೇಗೌಡ.—ಸರ್ವಿಸನ್ನು ಪರಿಗಣನೆಗೆ ತೆಗೆದುಕೊಳ್ಳುವುದರ ಜೊತೆಗೆ ಕಾನ್ಫಿಡೆನ್ಷಿಯಲ್ ರಿಪೋರ್ಟನ್ನು ಸಹ ಪರಿಗಣನೆಗೆ ತೆಗೆದುಕೊಳ್ಳುತ್ತೇವೆ.

Unauthorised Occupation of Gomal Land in Gubbi Taluk

55. Sri GATTI CHANDRASEKHAR (Gubbi).—

Will the Minister for Revenue be pleased to state :—

(*a*) whether it has come to the notice of the Government that the Ryots in each and every village of Gubbi Taluk have occupied the Gomal lands unauthorisedly ;

(*b*) if so, the definite policy of the Government in this behalf ?

† Indicates that the remarks or speechs have not been revised by the membe. concerned.